

ವಿಜಯಕುಮಾರಿ

# ಚಾಲಾಕಿ ಮೇಕೆ ಮರಿ

ಊರಾಚೆಯ ಪುರಾತನ ಕೋಟೆಯ ಸುತ್ತಲಿನ ಪ್ರದೇಶದಲ್ಲಿ ಹುಲುಸಾಗಿ ಹಸಿರು ಹುಲ್ಲು ಬೆಳೆದಿತ್ತು. ಹೀಗಾಗಿ ಕುರಿಗಾಹಿಗಳು ತಮ್ಮ ಕುರಿ, ಮೇಕೆಗಳನ್ನು ಹುಲ್ಲು ಮೇಯಲು ಅಲ್ಲಿ ಕರೆತರುತಿದ್ದರು. ಅವೂ ಕೂಡ ಹಿಂಡು ಹಿಂಡಾಗಿ ಆನಂದದಿಂದ ಹುಲ್ಲು ಮೇಯುತ್ತಿದ್ದವು.

ಒಂದು ಬಾರಿ ಆ ಹಿಂಡಿನ ಪೈಕಿ ಒಂದು ಪುಟ್ಟ ಮೇಕೆ ಮರಿ, ಹುಲ್ಲು ಮೇಯುತ್ತ, ಮೇಯುತ್ತಾ ತನಗೆ ಗೊತ್ತಿಲ್ಲದೇ ಗುಂಪಿನಿಂದ ದೂರ ಬಂದು ಬಿಟ್ಟಿತು. ಒಂಟಿ ಮೇಕೆ ಮರಿಯ ಕಂಡು, ಅದೆಲ್ಲೋ ಅಡಗಿ ಕುಳಿತ ತೋಳ ಬಂದು ಸದ್ದಿಲ್ಲದೇ ಓಡಿ ಬಂದು ಆ ಮೇಕೆ ಮರಿಯನ್ನು ಹಿಡಿದುಕೊಡಿತು. ಅದರ ಬಲವಾದ ತೆಕ್ಕೆಯಲ್ಲಿ ಸಿಲುಕಿ, ಒದ್ದಾಡುತ್ತಿದ್ದ ಮೇಕೆ ಮರಿ 'ಅಯ್ಯೋ... ಹುಚ್ಚಪ್ಪಾ.. ಯಾಕಿಷ್ಟು ಆತುರ ಪಡುತ್ತೀ.. ಇಲ್ಲಿ ಯಾರೂ ಬರಲ್ಲ, ಅದು ಅಲ್ಲದೇ ನಾನು ಈಗಷ್ಟೇ ಹೊಟ್ಟೆ ತುಂಬ ಹಸಿರು ಹುಲ್ಲು ತಿಂದಿದ್ದೇನೆ, ಅದು ಕರಗಿದರೆ ನನ್ನ ಮಾಂಸ ಇನ್ನೂ ರುಚಿಯಾಗಿರುತ್ತದೆ. ಅದು ಬೇಗ ಕರಗಬೇಕೆಂದರೆ ಸ್ವಲ್ಪ ಸಮಯ ನಾನು ಇಲ್ಲಿ ಕುಣಿದಾಡಬೇಕು'. ಎಂದಿತು.

ವಾರೆ ಕಣ್ಣಿನಿಂದ ಅದನ್ನು ನೋಡುತ್ತ ತೋಳ 'ಏಯ್... ನೀನು ನನಗೆ ಮೋಸ ಮಾಡಲ್ಲ ತಾನೆ?' ಎಂದು ಕೇಳಿದಾಗ ಮೇಕೆ ಮರಿ 'ಅಂತಹ ದುರ್ಬುದ್ಧಿ ನನಗಿಲ್ಲ' ಎನ್ನುತ್ತ, 'ಹಾಂ ನಾನು ಚೆನ್ನಾಗಿ ಕುಣಿಯಲು ಹುಮ್ಮಸ್ಸು ಬರಬೇಕೆಂದರೆ, ನೀನು ನನ್ನ ಕೊರಳಲ್ಲಿರುವ ಗಂಟೆ ತೆಗೆದುಕೊಂಡು ಬಿಡುವಿಲ್ಲದೇ ಬಾರಿಸುತ್ತಿರು' ಎಂದಿತು.

ಅದರ ಮಾತು ಕೇಳಿಸಿಕೊಂಡ ತೋಳವಾವ್... ಇಂಥ ಚಾನ್ಸ್ ಬಿಡಬಾರದು ಎಂದು ಅಂದುಕೊಳ್ಳುತ್ತ ಮೇಕೆ ಮರಿಯ ಕೊರಳಲ್ಲಿನ ಗಂಟೆ ಕಳಚಿಕೊಂಡು ಬಿಡುವಿಲ್ಲದೇ ಒಂದೇ ಸಮ ಬಾರಿಸತೊಡಗಿತು.

ಅದ್ಯಾಕೋ ಗಂಟೆಯ ಶಬ್ದ ತುಂಬಾನೇ ಕೇಳಿ ಬರುತ್ತಿದೆಯಲ್ಲ, ಎಂದು ಅನುಮಾನ ಗೊಂಡ ಮೇಕೆಯ ಮಾಲೀಕ ತನ್ನ ಜೊತೆಗಾರರೊಂದಿಗೆ ದೊಣ್ಣೆ ಸಮೇತ ಓಡಿ ಬರುತ್ತಿರುವುದನ್ನು ಕಂಡ ತೋಳ 'ಇನ್ನು ನಾನು ಇಲ್ಲಿದ್ದರೆ ನನ್ನ ಕಥೆ ಫಿನಿಶ್' ಎಂದು ಅಂದುಕೊಳ್ಳುತ್ತ ಕೈ ಯಲ್ಲಿದ್ದ ಗಂಟೆ ಅಲ್ಲೇ ಬಿಸಾಕಿ ದಿಕ್ಕಾಪಾಲಾಗಿ ಓಡಿತು.

■ ಸಂಗ್ರಹ: **ಅರವಿಂದ ಜಿ. ಜೋಷಿ**